

ಕೊಡುತ್ತವೆ. ಇಂಡಿಯನ್, ಅರೇಬಿಯನ್, ಬ್ರೈಡಲ್... ಹೀಗೆ ಎಲ್ಲಾ ವಿನ್ಯಾಸಗಳಲ್ಲೂ ಈ ಬಿಳಿ ಮೆಹೆಂದಿ ಜಾಗ ಪಡೆದಿವೆ. ಎಲ್ಲರಿಗಿಂತ ವಿಭಿನ್ನ ಶೈಲಿಯ ಮೂಲಕ ಗುರುತಿಸಿಕೊಳ್ಳಲು ಇಷ್ಟಪಡುವವರಿಗೆ ಇದು ಸರಿಯಾದ ಆಯ್ಕೆ. ಡಿಸೈನ್ ಬಿಡಿಸಿಕೊಂಡ ಬಳಿಕ ಅದರ ಮೇಲೆ ಕೆಲ ವಸ್ತುಗಳಿಂದ ಅಲಂಕಾರ ಮಾಡಿದರೆ ಮತ್ತೂ ಚಂದ ಕಾಣುತ್ತದೆ.

## ಸಾಂಪ್ರದಾಯಿಕ ಮೆಹೆಂದಿ

ಮೆಹೆಂದಿ ಪ್ರಾಚೀನ ಭಾರತದಲ್ಲಿ ಹುಟ್ಟಿಕೊಂಡ ಒಂದು ಸಾಂಪ್ರದಾಯಿಕ ಕಲೆ. ಇದಕ್ಕೆ ಗೋರಂಟಿ, ಹಚ್ಚೆ, ಹೆನ್ನಾ ಎಂದೂ ಕರೆಯಲಾಗುತ್ತದೆ. ಹಿಂದೂ ಸಂಪ್ರದಾಯದಲ್ಲಿ ಕರವಾಚೌತ್, ದೀಪಾವಳಿ, ತೀಜ್ ಮುಂತಾದ ವಿಶೇಷ ಸಂದರ್ಭಗಳಲ್ಲಿ ಹೆಂಗಳೆಯರು ತಮ್ಮ ಕೈ ಕಾಲುಗಳ ಅಲಂಕಾರಕ್ಕೆ ಮೆಹೆಂದಿ ಬಳಸುತ್ತಿದ್ದರು. ಹಿಂದಿನ ಕಾಲದಿಂದಲೂ ಅರಿಶಿನ ಮತ್ತು ಗೋರಂಟಿಗಳನ್ನು ಮಹಿಳೆಯರು ಸೌಂದರ್ಯವರ್ಧಕವಾಗಿ ಬಳಸುತ್ತಿದ್ದರು. ಆದರೆ 90ರ ದಶಕದಲ್ಲಿ ಈ ಮೆಹೆಂದಿ ಒಂದು ಫ್ಯಾಷನ್ ಆಗಿ ಮಾರ್ಪಟ್ಟಿದೆ.

ಈಗ ಏನಿದ್ದರೂ ರೆಡಿಮೇಡ್ ಕಾಲ. ಆಧುನಿಕ ಯುಗದಲ್ಲಿ ಸಮಾರಂಭಕ್ಕೆ ಹೋಗುವ ಸ್ವಲ್ಪ ಸಮಯದ ಮುಂಚೆಯೂ ಈ ರೆಡಿಮೇಡ್ ಮೆಹೆಂದಿ ಬಳಸಬಹುದು. ತ್ರಿಕೋನಾಕಾರದ ಪ್ಲಾಸ್ಟಿಕ್ ಕವರ್‌ಗಳಲ್ಲಿ ತುಂಬಿರುವ ಈ ಮೆಹೆಂದಿ ಎಲ್ಲಾ ಫ್ಯಾನ್ಸಿ ಸ್ಟೋರ್‌ಗಳಲ್ಲಿ ಲಭ್ಯ.

ಗ್ರಾಮೀಣ ಪ್ರದೇಶಗಳಲ್ಲಿ ಮಹಿಳೆಯರು ತಾಜಾ ಗೋರಂಟಿಯನ್ನು ತಯಾರಿಸುತ್ತಿದ್ದರು. ಗೋರಂಟಿ ಮರಗಳಿಂದ ಎಲೆಗಳನ್ನು ಕಿತ್ತು ಅದಕ್ಕೆ ನೀರು ಬೆರೆಸಿ ಅದನ್ನು ನುಣ್ಣಗೆ ರುಬ್ಬಿಕೊಂಡು ಅದನ್ನೇ ನೇರವಾಗಿ ಕೈಕಾಲುಗಳಿಗೆ ಚಿತ್ರ ಬಿಡಿಸಿಕೊಳ್ಳುತ್ತಿದ್ದರು. ಇದು ತುಂಬಾ ಹಳೆಯ ಮಾದರಿಯಾದರೂ ಇದು ಇನ್ನೂ ಗ್ರಾಮೀಣ ಭಾಗದಲ್ಲಿ ಪ್ರಚಲಿತವಾದಂತೆ ಈಗಿನ ಆಧುನಿಕ ಯುಗದಲ್ಲಿ ಸಮಯದ ಅಭಾವದಿಂದ ಈಗ ರೆಡಿಮೇಡ್ ಮೆಹೆಂದಿಯನ್ನು ಬಳಸಲಾಗುತ್ತಿದೆ. ಕೈಗಳಿಗೆ ಮೆಹೆಂದಿ ಹಚ್ಚಿದಾಗ ಬಣ್ಣ ಗಾಢವಾಗಿ ಕಾಣಲು ಕೆಲ ರಾಸಾಯನಿಕಗಳನ್ನು ಬಳಸಲಾಗುತ್ತದೆ. ಆದರೆ ಈ ರಾಸಾಯನಿಕ ಕೆಲವೊಮ್ಮೆ ಚರ್ಮದ ಮೇಲೆ ಅನೇಕ ರೋಗಗಳನ್ನು ಹರಡಬಹುದು.

## ಮೆಹೆಂದಿ ಶಾಸ್ತ್ರ

ಭಾರತದ ಕೆಲವು ಪ್ರಾಂತ್ಯಗಳಲ್ಲಿ ಮದುವೆಯ ಹಿಂದಿನ ದಿನ ಮೆಹೆಂದಿ ಶಾಸ್ತ್ರವಿರುತ್ತದೆ. ಆ ದಿನ ವಧುವಿನ ಕೈಗಳ ಮೇಲೆ ವರನ ಹೆಸರು ಅಥವಾ ಹೆಸರಿನ ಮೊದಲನೇ ಅಕ್ಷರ ಬಿಡಿಸಿ ನಂತರ ಅದರ ಸುತ್ತಲೂ ಸುಂದರವಾದ ವಿನ್ಯಾಸ ಮಾಡಿ ಎಲ್ಲರೂ ಮೆಚ್ಚುವ ತರಹ ಮೆಹೆಂದಿಯ ಅಲಂಕಾರ ಮಾಡುತ್ತಾರೆ. ವಧುವಿನ ಅಲಂಕಾರಕ್ಕೆಂದೇ ವಿಶೇಷ ನುರಿತ ಮೆಹೆಂದಿ ವಿನ್ಯಾಸಕಾರರನ್ನು ಬರಮಾಡಿಕೊಳ್ಳಲಾಗುತ್ತದೆ. ಈ ಸಂದರ್ಭದಲ್ಲಿ ಮನೆಯ ಎಲ್ಲ ಸದಸ್ಯರೂ ಪಾಲ್ಗೊಂಡು ಮೆಹೆಂದಿ ಹಾಕಿಸಿಕೊಳ್ಳುತ್ತಾರೆ. ಇದು ಬಳೆ ತೊಡಿಸುವ ಸಮಾರಂಭದಷ್ಟೇ ಅದ್ದೂರಿಯಾಗಿರುತ್ತದೆ. ಇದರಲ್ಲಿ ಹಾಡು, ನೃತ್ಯ, ಇನ್ನಿತರ ಕಾರ್ಯಕ್ರಮಗಳಿರುತ್ತವೆ. ಈಗಂತೂ ಮೆಹೆಂದಿ ಹಾಕುವುದು ಒಂದು ವ್ಯಾಪಾರವಾಗಿಬಿಟ್ಟಿದೆ.

ಮೊದ ಮೊದಲು ರಸ್ತೆಯ ಪಕ್ಕದಲ್ಲಿ ಕುಳಿತುಕೊಂಡು ಮೆಹೆಂದಿ ಹಚ್ಚುತ್ತಿದ್ದ ವ್ಯಾಪಾರಿಗಳು ಈಗ ಮೆಹೆಂದಿ ಪಾರ್ಲರ್‌ಗಳನ್ನೇ ತೆರೆದಿದ್ದಾರೆ. ಮೆಹೆಂದಿ ಹಾಕಲು 100 ರಿಂದ 200 ರೂಪಾಯಿ ತೆಗೆದುಕೊಳ್ಳುತ್ತಿದ್ದವರು ಈಗ ಸಾವಿರ ರೂಪಾಯಿಗಳವರೆಗೆ ತಮ್ಮ ಬೆಲೆ ಏರಿಸಿಕೊಂಡಿದ್ದಾರೆ. ಮೆಹೆಂದಿ ಈಗ ಎಷ್ಟರಮಟ್ಟಿಗೆ ಮೋಡಿ ಮಾಡಿದೆ ಎಂದರೆ ಇದು ಇಲ್ಲದೆ ಯಾವ ಹೆಣ್ಣು ಮಕ್ಕಳೂ ಸಮಾರಂಭಕ್ಕೆ ಹೋಗುವ ಹಾಗಿಲ್ಲ. ಈಗಿನ ಯುವ ಪೀಳಿಗೆಯವರ ಹೊಸ ಟ್ರೆಂಡ್ ಆಗಿರುವ ಈ ಮೆಹೆಂದಿಯ ಗುಣಮಟ್ಟದ ಬಗ್ಗೆಯೂ ಯೋಚಿಸುವ ಗೋಜಿಗೂ ಹೋಗುವುದಿಲ್ಲ.

ಮೆಹೆಂದಿ ಹಾಕಿಸಿಕೊಂಡ ನಂತರ ಸುಮಾರು 12 ಅಥವಾ 24 ಗಂಟೆಯ ನಂತರ ಇದರ ಬಣ್ಣ ತೆಳು ಕಿತ್ತಳೆಯಿಂದ, ಕಡುಕೆಂಪು ಬಣ್ಣಕ್ಕೆ ತಿರುಗುತ್ತದೆ. ಮೆಹೆಂದಿಯ ಗುಣಮಟ್ಟ ಚೆನ್ನಾಗಿದ್ದರೆ ಒಂದು ತಿಂಗಳುಗಳ ಕಾಲ ಚೆನ್ನಾಗಿ ಎದ್ದು ಕಾಣುತ್ತದೆ. ಇದರಲ್ಲಿ ಅರೇಬಿಕ್ ಮೆಹೆಂದಿ ವಿನ್ಯಾಸಕ್ಕೆ ಬಹಳ ಪ್ರಾಶಸ್ತ್ಯ ಇದೆ. ಈಗೀಗ ಮೆಹಂದಿಯನ್ನು ತಲೆಗೂದಲಿಗೆ ಹಚ್ಚುವ ಪರಿಪಾಟವೂ ಮಹಿಳೆಯರಲ್ಲಿದೆ. ■

- ಮೆಹೆಂದಿ ಹಚ್ಚಿಕೊಂಡು ಅದು ಒಣಗುವ ಹಂತಕ್ಕೆ ಬಂದಾಗ ಸಕ್ಕರೆ ಮತ್ತು ಲಿಂಬೆಹಣ್ಣಿನ ರಸ ಸಮನಾಗಿ ಮಿಶ್ರಣ ಮಾಡಿ ಸ್ವಲ್ಪಮಟ್ಟಿಗೆ ಬೆಚ್ಚಗೆ ಕಾಯಿಸಿ ಮೆಹೆಂದಿ ಹಚ್ಚಿದ ಭಾಗಕ್ಕೆ ಚಿಮುಕಿಸಿ. ಅರ್ಧ ಗಂಟೆಗೊಂದು ಸಾರಿ ಈ ರೀತಿ ಮಾಡುತ್ತಿದ್ದರೆ ಮೆಹೆಂದಿಯ ಬಣ್ಣ ಗಾಢವಾಗುತ್ತದೆ.
- ಮೆಹೆಂದಿ ಹಚ್ಚಿಕೊಂಡ ನಂತರ ಅದು ಆರಿದ ಮೇಲೆ ಅದನ್ನು ನಿಧಾನವಾಗಿ ತೊಳೆದು ತೆಂಗಿನೆಣ್ಣೆ ಹಚ್ಚಬೇಕು. ಇದರಿಂದ ಕೂಡ ಗಾಢ ವರ್ಣ ಬರುತ್ತದೆ ಮತ್ತು ಒಂದು ದಿನದ ಮಟ್ಟಿಗೆ ಸೋಪಿನಿಂದ ಮೆಹೆಂದಿ ಹಾಕಿದ ಭಾಗಕ್ಕೆ ಉಜ್ಜಬಾರದು.